# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - THURSDAY 8-6-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಪರ್ಯಾಯ ಖಾದ್ಯತೈಲ ದರ ಪ್ರಬಲತೆ, ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಳ

ಪರ್ಯಾಯ ಖಾದ್ಯತೈಲ ಗಳ ದರ ಪ್ರಬಲತೆಯಿಂದ ಮಲೇಶಿಯನ್ ಪಾಮೆಣ್ಣೆ ದರ 1.45 ಶೇಕಡಾ, ಟನ್‌ಗೆ 48 ರಿಂಗಿಟ್ಸ್ ಹೆಚ್ಚಳವಾಗಿ 3364 ರಿಂಗಿಟ್ಸ್ ($ 730.99) ಆಗಿದೆ. ಆದರೆ ಉತ್ಪಾದನೆ ಹೆಚ್ಚಳದಿಂದ ದರ ಹೆಚ್ಚಳ ಸೀಮಿತವಾಗಿದೆ. ಮೇ ತಿಂಗಳಲ್ಲಿ ಮಲೇಶಿಯನ್ ಪಾಮೆಣ್ಣೆ ಉತ್ಪಾದನೆ 6.8 ಶೇಕಡಾ ಹೆಚ್ಚಳದೊಂದಿಗೆ 1.6 ಮಿಲಿಯನ್ ಟನ್‌ಗಳಿಗೇರಿ 5 ತಿಂಗಳ ಗರಿಷ್ಠ ಮಟ್ಟ ತಲುಪಲಿದೆಯೆನ್ನಲಾಗಿದೆ. ಇಂಡೋನೇಶಿಯಾದಲ್ಲಿ ಒಣ ಹವೆ, ಎಲ್ ನಿನೋ ಪ್ರಭಾವದಿಂದ ಕಟಾವು ಇಳಿಕೆಯಾಗಿ ಉತ್ಪಾದನೆ ಇಳಿಕೆಯಾಗುವ ಭೀತಿಯನ್ನೆದುರಿಸುತ್ತಿದೆಯೆನ್ನಲಾಗಿದೆ.

### ತೊಗರಿ, ಉದ್ದು ಹಾಗೂ ಮಸೂರ್ ಮೇಲಿನ 40 ಶೇಕಡಾ ಖರೀದಿ ಮಿತಿ ಹಿಂತೆಗೆತ

ಪಿ ಎಸ್ ಎಸ್ ಸ್ಕೀಮಿನನ್ವಯ ಉದ್ದು, ತೊಗರಿ ಹಾಗೂ ಮಸೂರ್ (40 ಶೇಕಡಾ ಮಿತಿ) ಖರೀದಿ ಮಿತಿಯನ್ನು ಹಿಂತೆಗಿಯಲಾಗಿದೆಯೆನ್ನಲಾಗಿದೆ. ಇದರಿಂದು ತೊಗರಿ, ಉದ್ದು ಹಾಗೂ ಮಸೂರ್ ಉತ್ಪಾದನೆ ಹೆಚ್ಚಳಕ್ಕೆ ಬೆಂಬಲ ಲಭಿಸಿದೆಯೆನ್ನಲಾಗಿದೆ. ಖರೀದಿಯ ಖಚಿತತೆಯಿಂದಾಗಿ ಬೆಳೆ ಬೆಳೆಯಲು ಉತ್ತೇಜನ ಲಭಿಸಿದಂತಾಗುತ್ತದೆಯೆನ್ನಲಾಗಿದೆ. ದರ ಹೆಚ್ಚಳ ಖರೀದಿಯ ಗ್ಯಾರೆಂಟಿಗಳಿಂದಾಗಿ ದೇಶೀ ಬೇಳೆಕಾಳು ಉತ್ಪಾದನೆ ಹೆಚ್ಚಳಕ್ಕೆ ಬೆಂಬಲವಾಗಲಿದೆಯೆನ್ನಲಾಗಿದೆ.

### ಗೋಧಿ ದರ ಹೆಚ್ಚಳ, ಜೋಳ ದರ ಇಳಿಕೆ

ರಾಜಸ್ಥಾನದ ಕೋಟಾ ಮಾರುಕಟ್ಟೆಯಲ್ಲಿ ಗೋಧಿ ದರ ಹೆಚ್ಚಳವಾಗಿದೆ. ಮಧ್ಯಪ್ರದೇಶ ಇಂದೋರ್ ನಲ್ಲಿ ಗೋಧಿ ದರ ಹೆಚ್ಚಳವಾಗಿದೆ. ದಾವಣಗೆರೆ ಹಾಗೂ ಬಿಹಾರದ ಪೂರ್ನಿಯಾ ಮಾರುಕಟ್ಟೆಗಳಲ್ಲಿ ಜೋಳ ದರ ಇಳಿಕೆಯಾಗಿದೆ.

### ಭತ್ತ ಬೆಂಬಲ ಬೆಲೆ 7 ಶೇಕಡಾ ಹೆಚ್ಚಳ

ಭತ್ತದ ಬೆಂಬಲ ಬೆಲೆ 7 ಶೇಕಡಾ ಹೆಚ್ಚಳಗೊಳಿಸಿ ಕ್ವಿಂಟಾಲ್‌ಗೆ ರೂ.2183 ಕ್ಕೆ ಸರಕಾರ ನಿಗದಿಗೊಳಿಸಿದೆಯೆನ್ನಲಾಗಿದೆ.